KAKB620011422022

Presented on : 04-07-2022
Registered on : 05-07-2022
Decided on : 06-03-2026
Duration : 3 years, 8 months, 2 days

**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜೇವರ್ಗಿ.**

**ಉಪಸ್ಥಿತರುಃ**

**ಶ್ರೀ ಕಾಶಿನಾಥ ವಿ. ಉಪ್ಪಾರ್**

ಬಿ.ಎಸ್.ಸಿ. ಎಲ್ಎಲ್.ಬಿ.,
ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರ್ಗಿ.

**ಸಿ.ಸಿ.ನಂ.661/2022**

**ದಿನಾಂಕಃ 06ನೇ ಮಾರ್ಚ - 2026 ರಂದು**

**ಫಿರ್ಯಾದಿದಾರರುಃ**

ಕರ್ನಾಟಕ ರಾಜ್ಯ ಯಡ್ರಾಮಿ ಪೊಲೀಸರಿಂದ)

**(ಸಹಾಯಕ ಸರ್ಕಾರಿ ಅಭಿಯೋಜಕರು)**

**- ವಿರುದ್ದ -**

**ಆರೋಪಿತರುಃ**

1. ವೀಣಾ ಗಂಡ ಗುರುರಾಜ ಹುರಗಡ್ಲಿ
   ವಃ 49 ವರ್ಷ, ಉದ್ಯೋಗಃ ಕೂಲಿ,
   ಸಾಃ ಗೋಲಗೇರಿ, ತಾಃ ಸಿಂಧಗಿ, ಜಿಃ ವಿಜಯಪೂರ

2. ಹಣಮಂತ ತಂದೆ ಮರೇಪ್ಪ ಯಂಟಮಾನ,
   ವ: 55 ವರ್ಷ, ಉದ್ಯೋಗಃ ಒಕ್ಕಲುತನ,
   ಸಾಃ ಹೊನ್ನಳ್ಳಿ, ತಾಃ ಸಿಂಧಗಿ, ಜಿಃ ವಿಜಯಪೂರ

**(ಆರೋಪಿತರ ಪರ ಶ್ರೀ ಜೆ.ವಿ.ಹೆಚ್., ವಕೀಲರು)**

1. ಪ್ರಕರಣ ನಡೆದ ದಿನಾಂಕ : 16-02-2022
2. ಪ್ರಕರಣ ದಾಖಲಾದ ದಿನಾಂಕ : 20-02-2022
3. ಆರೋಪಿತರನ್ನು ಬಂಧಿಸಿದ ದಿನಾಂಕ : --
4. ಫಿರ್ಯಾದಿದಾರರ ಹೆಸರು : ದೇವಕಿ ಗಂಡ ಲಕ್ಷ್ಮಣ
5. ಸಾಕ್ಷಿಗಳ ವಿಚಾರಣೆ ಪ್ರಾರಂಭದ ದಿನಾಂಕ : 29-01-2025
6. ಸಾಕ್ಷಿಗಳ ವಿಚಾರಣೆ ಮುಕ್ತಾಯದ ದಿನಾಂಕ: 09-01-2026
7. ಅಪಾದನೆಗಳು : ಭಾ.ದಂ.ಸಂ.ಕಲಂ 447, 323, 504, 504, 506, ಸಹ ಕಲಂ 34 ರಡಿಯಲ್ಲಿ
8. ನ್ಯಾಯಾಧೀಶರ ತೀರ್ಮಾನ : ಅಂತಿಮ ಆದೇಶದಂತೆ

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರಗಿ.

**ತೀರ್ಪು**

ಆರಕ್ಷಕ ಉಪ ನಿರೀಕ್ಷಕರು ಯಡ್ರಾಮಿ ಪೊಲೀಸ್ ಠಾಣೆ, ನೆಲೋಗಿ ಇವರು ಆರೋಪಿತರ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 447, 323, 504, 509, 506, ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪಾದನೆಗಾಗಿ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರಣೆಃ-**

ದಿನಾಂಕ 16-02-2022 ರಂದು ಮದ್ಯಾಹ್ನ 12-30 ಗಂಟೆ ಸುಮಾರಿಗೆ ಯಡ್ರಾಮಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಬಿರಾಳ ಹಿಸ್ಸಾ ಗ್ರಾಮದ

ಚಾಸಾ-1 ಅವರ ಹೊಲ ಸರ್ವೆ ನಂ.47 ರಲ್ಲಿ, ಆರೋಪಿತರೆಲ್ಲರೂ ಸಮಾನ ಉದ್ದೇಶದಿಂದ ಕೂಡಿಕೊಂಡು ಫಿರ್ಯಾದಿದಾರರ ಹೊಲದಲ್ಲಿ ಅಕ್ರಮ ಪ್ರವೇಶ ಮಾಡಿ ಗಳೆ ಹೊಡೆಯುವ ವಿಚಾರವಾಗಿ ವಿನಾಕಾರಣ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈಯ್ದು ಸಾರ್ವಜನಿಕವಾಗಿ ಅವಮಾನ ಪಡಿಸಿದ್ದು, ಆರೋಪಿ ನಂ.2 ನೆದ್ದವನು ಚಾಸಾ-1 ಮತ್ತು ಚಾಸಾ-4 ಅವರ ಮಾನಕ್ಕೆ ಕುಂದು ಬರುವ ಹಾಗೆ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಪಡಿಸಿದ್ದು, 1ನೇ ಆರೋಪಿತನು ಚಾಸಾ-4 ಅವರಿಗೆ ಕೈ ಹಿಡಿದು ನೂಕಿಸಿಕೊಟ್ಟು ಗುಪ್ತಗಾಯಗಳನ್ನು ಪಡಿಸಿದ್ದಲ್ಲದೆ, ಚಾಸಾ-1 ಮತ್ತು ಚಾಸಾ-4 ಅವರನ್ನು ನಿಮಗೆ ಜೀವ ಸಹಿತ ಬಿಡುವುದಿಲ್ಲ ಖಲಾಸ ಮಾಡುತ್ತೇವೆಂದು ಜೀವದ ಬೆದರಿಕೆ ಹಾಕಿರುತ್ತಾರೆಂದು ಫಿರ್ಯಾದಿಯನ್ನು ನೀಡಿರುತ್ತಾರೆ.

3. ಸದರಿ ಫಿರ್ಯಾದಿಯ ಆಧಾರದ ಮೇಲೆ ನೆಲೋಗೆ ಪೊಲೀಸರು ತಮ್ಮ ಠಾಣಾ ಗುನ್ನಾ ನಂ.35/2022 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ತನಿಖೆ ಪೂರ್ಣಗೊಂಡ ನಂತರ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 447, 323, 504, 509, 506, ಸಹ ಕಲಂ 34 ರಡಿಯಲ್ಲಿನ ಶಿಕ್ಷಾರ್ಹ ಅಪರಾಧದಿಂದ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

4. ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ. ದೋಷಾರೋಪಣೆ ಪತ್ರ ಸಲ್ಲಿಸಿದ ನಂತರ ಪ್ರಕರಣದ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತರ ವಿರುದ್ಧ ಸಮನ್ಸ ಜಾರಿ ಮಾಡಿ, ಆರೋಪಿತರ ಹಾಜರಾತಿಯನ್ನು ಪಡೆಯಲಾಯಿತು. ನಂತರ ದಂಡ ಪ್ರಕ್ರಿಯಾ

ಸಂಹಿತೆ ಕಲಂ 207 ರ ಪ್ರಕಾರ ದೋಷಾರೋಪಣೆ ಪತ್ರದ ನಕಲು ಪ್ರತಿಯನ್ನು ಆರೋಪಿತರಿಗೆ ನೀಡಿ, ದೋಷಾರೋಪಣೆಯನ್ನು ರಚಿಸುವ ಮುನ್ನ ವಾದ ವಿವಾದವನ್ನು ಆಲಿಸಲಾಯಿತು. ನಂತರ ಭಾರತೀಯ ದಂಡ ಸಂಹಿತೆ ಕಲಂ 447, 323, 504, 509, 506, ಸಹ ಕಲಂ 34 ರಡಿಯಲ್ಲಿ ದೋಷಾರೋಪಣೆಯನ್ನು ರಚಿಸಿ ಆರೋಪಿತರಿಗೆ ಓದಿ ಹೇಳಲಾಗಿ, ಸದರಿ ದೋಷಾರೋಪಣೆಯ ಆರೋಪಗಳನ್ನು ಒಪ್ಪಿಕೊಂಡಿರುವುದಿಲ್ಲ ಮತ್ತು ವಿಚಾರಣೆ ನಡೆಯಬೇಕೆಂದು ಕೇಳಿಕೊಂಡಿರುತ್ತಾರೆ.

5. ಅಭಿಯೋಜನೆಯು ಆರೋಪಿತರ ವಿರುದ್ದ ಆಪಾದನೆಗಳನ್ನು ಸಾಬೀತು ಪಡಿಸುವ ಸಲುವಾಗಿ ಒಟ್ಟು 06 ಜನ ಸಾಕ್ಷಿದಾರರು ಪ್ರಾಸಾ-1 ರಿಂದ 6 ಎಂದು ಸಾಕ್ಷಿ ವಿಚಾರಣೆ ಮಾಡಿಸಿದ್ದು, ನಿಶಾನೆ ಪಿ-1 ರಿಂದ 03 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪರ ಸಾಕ್ಷಿದಾರರ ವಿಚಾರಣೆಯಾದ ನಂತರ ದ.ಪ್ರ.ಸಂ.ಕಲಂ.313 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ಪಡೆಯಲಾಯಿತು. ಆರೋಪಿತರು ತಮ್ಮ ಪರವಾಗಿ ಸಾಕ್ಷಿ ವಿಚಾರಣೆಗೆ ಮುಂದಾಗಿರುವುದಿಲ್ಲ.

6. ಉಭಯ ಪಕ್ಷಗಾರರ ವಾದ ವಿವಾದವನ್ನು ಆಲಿಸಲಾಯಿತು.

7. ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆಃ

## **ಅಂಶಗಳು**

1. ದಿನಾಂಕ16-02-2022 ರಂದು ಮದ್ಯಾಹ್ನ 12-30 ಗಂಟೆ ಸುಮಾರಿಗೆ ಯಡ್ರಾಮಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಬಿರಾಳ ಹಿಸ್ಸಾ ಗ್ರಾಮದ ಚಾಸಾ-1 ಅವರ ಹೊಲ ಸರ್ವೆ ನಂ.47 ರಲ್ಲಿ, ಆರೋಪಿತರೆಲ್ಲರೂ ಸಮಾನ

ಉದ್ದೇಶದಿಂದ ಕೂಡಿಕೊಂಡು ಫಿರ್ಯಾದಿದಾರರ ಹೊಲದಲ್ಲಿ ಅಕ್ರಮ ಪ್ರವೇಶ ಮಾಡಿರುತ್ತಾರೆಂದು, ಆ ಮೂಲಕ ನೀವು ಭಾ.ದಂ.ಸಂ. ಕಲಂ 447 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ?

2. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ಚಾಸಾ-1 ಮತ್ತು ಚಾಸಾ-4 ಅವರ ಜೊತೆ ಗಳೆ ಹೊಡೆಯುವ ವಿಚಾರವಾಗಿ ವಿನಾಕಾರಣ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈಯ್ದು ಸಾರ್ವಜನಿಕವಾಗಿ ಅವಮಾನ ಪಡಿಸಿರುತ್ತಾರೆಂದು, ಆ ಮೂಲಕ ನೀವು ಭಾ.ದಂ.ಸಂ. ಕಲಂ 504 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ?

3. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ಗಳೆ ಹೊಡೆಯುವ ವಿಚಾರವಾಗಿ ವಿನಾಕಾರಣ ಜಗಳ ತೆಗೆದು, ಆರೋಪಿ ನಂ.2 ನೆದ್ದವನು ಚಾಸಾ-1 ಮತ್ತು ಚಾಸಾ-4 ಅವರ ಮಾನಕ್ಕೆ ಕುಂದು ಬರುವ ಹಾಗೆ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಪಡಿಸಿದ್ದು ಪಡಿಸಿರುತ್ತಾರೆಂದು, ಆ ಮೂಲಕ ನೀವು ಭಾ.ದಂ.ಸಂ. ಕಲಂ 509 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ?

4. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1ನೇ ಆರೋಪಿತನು ಚಾಸಾ-4 ಅವರಿಗೆ ಕೈ ಹಿಡಿದು ನೂಕಿಸಿಕೊಟ್ಟು ಗುಪ್ತಗಾಯಗಳನ್ನು ಪಡಿಸಿರುತ್ತಾರೆಂದು, ಆ ಮೂಲಕ ನೀವು ಭಾ.ದಂ.ಸಂ. ಕಲಂ 323 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ?

5. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ಚಾಸಾ-1 ಮತ್ತು ಚಾಸಾ-4 ಅವರಿಗೆ ಅವಾಚ್ಯವಾಗಿ ಬೈದಿದ್ದಲ್ಲದೆ, ನಿಮಗೆ ಜೀವ ಸಹಿತ ಬಿಡುವುದಿಲ್ಲವೆಂದು ಜೀವದ ಬೆದರಿಕೆ ಹಾಕಿರುತ್ತಾರೆಂದು, ಆ ಮೂಲಕ ನೀವು ಭಾ.ದಂ.ಸಂ. ಕಲಂ 506 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ?

6. ಯಾವ ಆದೇಶ ಅಥವಾ ಶಿಕ್ಷೆ?

8. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆಃ

ಅಂಶ ನಂ.1 ರಿಂದ 5: ನಕರಾತ್ಮಕವಾಗಿ.

ಅಂಶ ನಂ.6 : ಅಂತಿಮ ಆದೇಶದಂತೆ ಈ ಳಕಂಡ ಕಾರಣಗಳಿಗಾಗಿ

**ಕಾ ರ ಣ ಗ ಳು**

9. **ಅಂಶ ನಂ.1 ರಿಂದ 5:-** ಸದರಿ ಅಂಶಗಳು ಒಂದಕ್ಕೊಂದು ಅಂತರ್ಗತ ವಾಗಿರುವುದರಿಂದ, ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

10. ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆಯ ನಿರ್ದಿಷ್ಟ ಆರೋಪವೇನೆಂದರೆ, ದಿನಾಂಕ 16-02-2022 ರಂದು ಮದ್ಯಾಹ್ನ 12-30 ಗಂಟೆ ಸುಮಾರಿಗೆ ಯಡ್ರಾಮಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಬಿರಾಳ ಹಿಸ್ಸಾ ಗ್ರಾಮದ ಚಾಸಾ-1 ಅವರ ಹೊಲ ಸರ್ವೆ ನಂ.47 ರಲ್ಲಿ, ಆರೋಪಿತರೆಲ್ಲರೂ ಸಮಾನ ಉದ್ದೇಶದಿಂದ ಕೂಡಿಕೊಂಡು ಫಿರ್ಯಾದಿದಾರರ ಹೊಲದಲ್ಲಿ ಅಕ್ರಮ ಪ್ರವೇಶ ಮಾಡಿ ಗಳೆ ಹೊಡೆಯುವ ವಿಚಾರವಾಗಿ ವಿನಾಕಾರಣ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈಯ್ದು ಸಾರ್ವಜನಿಕವಾಗಿ ಅವಮಾನ ಪಡಿಸಿದ್ದು, ಆರೋಪಿ ನಂ.2 ನೆದ್ದವನು ಚಾಸಾ-1 ಮತ್ತು ಚಾಸಾ-4 ಅವರ ಮಾನಕ್ಕೆ ಕುಂದು ಬರುವ ಹಾಗೆ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಪಡಿಸಿದ್ದು, 1ನೇ ಆರೋಪಿತನು ಚಾಸಾ-4 ಅವರಿಗೆ ಕೈ ಹಿಡಿದು ನೂಕಿಸಿಕೊಟ್ಟು ಗುಪ್ತಗಾಯಗಳನ್ನು ಪಡಿಸಿದ್ದಲ್ಲದೆ, ಚಾಸಾ-1 ಮತ್ತು ಚಾಸಾ-4 ಅವರನ್ನು ನಿಮಗೆ ಜೀವ ಸಹಿತ ಬಿಡುವುದಿಲ್ಲ ಖಲಾಸ ಮಾಡುತ್ತೇವೆಂದು ಜೀವದ ಬೆದರಿಕೆ ಹಾಕಿರುತ್ತಾರೆಂದು ಭಾ.ದಂ.ಸಂ.ಕಲಂ 447, 323, 504, 509, 506, ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಆರೋಪಿಸಿದ್ದು, ಸದರಿ ಆರೋಪದ ಅನುಸಾರ ಆರೋಪಿತರ ಹಾಜರಾತಿ ಪಡೆದ ನಂತರ ಆರೋಪಿತರಿಗೆ ಆಪಾದನೆಯನ್ನು ಓದಿ ಹೇಳಿದಾಗ, ಆರೋಪಿತರು ತಾವು ತಪ್ಪು ಮಾಡಿಲ್ಲವೆಂದು ಅಭಿಯೋಜನೆಯವರು ಮಾಡಿರುವ ಆಪಾದನೆಯನ್ನು ಅಲ್ಲಗಳೆದಿದ್ದಾರೆ. ಕಾನೂನಿನಡಿ ಲಭ್ಯವಿರುವ ಪೂರ್ವಭಾವನೆ ಏನೆಂದರೆ ಅಭಿಯೋಜನೆಯವರು ಆಪಾದಿತರ ಮೇಲೆ ಮಾಡಲಾದ ಆರೋಪವನ್ನು ಸಂಶಯಾತೀತವಾಗಿ ರುಜುವಾತು ಪಡಿಸುವವರೆಗೆ ಆರೋಪಿತರನ್ನು ಮುಗ್ದರೆಂದು ಪೂರ್ವಭಾನೆ ತಳೆಯಬೇಕು ಎಂಬುದಾಗಿದ್ದು, ಅದೇ ಪೂರ್ವಭಾವನೆಯನ್ನು ಈ ಪ್ರಕರಣದ

ಆರೋಪಿತರಿಗೂ ವಿಸ್ತರಿಸಿ, ಆಪಾದನೆ ರುಜುವಾತ ಪಡಿಸಲು ಅಭಿಯೋಜನೆಯವರನ್ನು ಆಹ್ವಾನಿಸಿದ ಮೇರೆಗೆ ಆರೋಪಣೆಯನ್ನು ರುಜುವಾತುಪಡಿಸುವ ಹೊಣೆಯನ್ನು ಹೊತ್ತಿ ಅಭಿಯೋಜನೆಯ ಪರ ನುಡಿ ಸಾಕ್ಷ್ಯದಲ್ಲಿ ಒಟ್ಟು 06 ಜನ ಸಾಕ್ಷಿದಾರರನ್ನು ವಿಚಾರಣೆ ಗುರಿಪಡಿಸಿರುತ್ತಾರೆ.

11. ಚಾಸಾ-1 ದೇವಕಿ, ಇವರು ತಮ್ಮ ಸಾಕ್ಷ್ಯದಲ್ಲಿ 16-02 ರಂದು 03 ವರ್ಷಗಳ ಹಿಂದೆ ಬಿರಾಳ ಗ್ರಾಮದ ತನ್ನ ಹೊಲ ಸರ್ವೆ ನಂ.47 ರಲ್ಲಿ 06 ಎಕರೆ, 19 ಗುಂಟೆ ಇದ್ದು, ಆ ದಿನ ಮದ್ಯಾಹ್ನ 12-30 ಗಂಟೆಗೆ ತಾನು, ಚಾಸಾ-4 ಅವರು ಹೊಲಕ್ಕೆ ಹೋದಾಗ, 2ನೇ ಆರೋಪಿ ತನ್ನ ಗಳೆ ಹೊಡೆಯುತ್ತಿದ್ದನು, ತಾನು ಮತ್ತು ಚಾಸಾ-4 ಅವರು ಗಳೆ ಹೊಡೆಯಬೇಡ ಎಂದು ಹೇಳಿದಾಗ 2ನೇ ಆರೋಪಿತನು ತನಗೆ ಅವಾಚ್ಯ ಶಬ್ದಗಳಿಂದ ಬೈದು, ಚಾಸಾ-4 ಅವರಿಗೆ ರಟ್ಟೆ ಹಿಡಿದು ಎಳೆದಾಡಿರುತ್ತಾನೆ, ಆರೋಪಿತರು ತನಗೆ ಕೊಡಲಿ ಬಡಿಗೆಯಿಂದ ಹೊಡೆದು ಖಲಾಸ ಮಾಡುತ್ತೇವೆಂದು ಜೀವದ ಬೆದರಿಕೆ ಹಾಕಿರುತ್ತಾರೆ, ನಂತರ ತಾನು ಪೊಲೀಸರ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಸಹಾಯಕ ಸರ್ಕಾರಿ ಅಭೀಯೋಜಕರು ಚಾಸಾ-1ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿರುತ್ತಾರೆ. ಆರೋಪಿ ಪರ ವಕೀಲರು ಚಾಸಾ-1 ರವರ ಪಾಟೀ ಸವಾಲಿನಲ್ಲಿ 1ನೇ ಆರೋಪಿತಳು ಜಮೀನು ವಿಚಾರವಾಗಿ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ನಂ 123/2021 ನ್ನು ಸಲ್ಲಿಸಿರುತ್ತಾರೆಂದು ಒಪ್ಪಿ ಕೊಳ್ಳುತ್ತಾರೆ. 1ನೇ ಆರೋಪಿತಳು 2015 ರಿಂದ 2023 ರವರೆಗೆ ಮೊಳಕಾಲು ನೋವಿನಿಂದ ಚಿಕಿತ್ಸೆ ಪಡೆಯುತ್ತಿದ್ದು, 1ನೇ ಆರೋಪಿತಳಿಗೆ ನಡೆಯಲು ಸಾಧ್ಯವಿಲ್ಲ ಎಂಬ ಸೂಚನೆಯನ್ನು ನಿರಾಕರಿಸಿರುತ್ತಾರೆ. ಚಾಸಾ-1 ರವರ ಗಂಡನಿಗೂ ಮತ್ತು

ಚಾಸಾ-1 ರವರಿಗೂ ಸಂಬಂಧ ಸರಿ ಇಲ್ಲ ಎಂದು ಒಪ್ಪಿ ಕೊಳ್ಳುತ್ತಾರೆ. ಘಟನೆ ದಿನಾಂಕಕ್ಕೂ ಮತ್ತು ದೂರು ದಾಖಲಾದ ದಿನಾಂಕಕ್ಕೂ 4 ದಿನಗಳ ಕಾಲವ್ಯತ್ಯಾವಿರುತ್ತದೆ ಎಂದು ಒಪ್ಪಿ ಕೊಳ್ಳುತ್ತಾರೆ. ಆರೋಪಿ ಪರ ವಕೀಲರು ಚಾಸಾ-1 ರವರಿಗೆ ಘಟನೆ ನಡೆದಿಲ್ಲ ಎಂಬ ಸೂಚನೆಯನ್ನು ನಿರಾಕರಿಸಿರುತ್ತಾರೆ.

12. ಚಾಸಾ-2 ಮತ್ತು 3 ರವರು ಗುನ್ನೆ ಸ್ಥಳದ ಪಂಚರಾಗಿದ್ದು, ಚಾಸಾ-2 ಮತ್ತು 3ರವರು ಗುನ್ನೆ ಸ್ಥಳದ ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಚಾಸಾ-1 ರವರ ಹೊಲ ಸರ್ವೆ ನಂಬರ 47 ರಲ್ಲಿ ಆರೋಪಿತರು ಮತ್ತು ಚಾಸಾ-1 ರವರ ನಡುವೆಆದ ಜಗಳದ ವಿಚಾರವಾಗಿ ಪೊಲೀಸರು ಪಂಚನಾಮೆ ಮಾಡಿದಕ್ಕಾಗಿ ತಾವು ಸಹಿ ಮಾಡಿರುತ್ತೇವೆ ಎಂದು ತಮ್ಮ ಸಾಕ್ಷಿಯಲ್ಲಿ ಹೇಳುತ್ತಾರೆ. ಆರೋಪಿ ಪರ ವಕೀಲರು ಚಾಸಾ-2 ಮತ್ತು3 ರವರನ್ನು ಪಾಟೀ ಸವಾಲು ಮಾಡಿದ್ದು , ಚಾಸಾ-1 ರವರಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ಹೇಳುತ್ತಿದ್ದಾರೆಎಂಬ ಸೂಚನೆಯನ್ನು ನಿರಾಕರಿಸಿರುತ್ತಾರೆ.

13. ಚಾಸಾ-4 ಚಂದ್ರಭಾಗಮ್ಮ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 16-02-2022 ರಂದು ಮದ್ಯಾಹ್ನ 12-00 ಗಂಟೆ ಸಮಯದಲ್ಲಿ ಚಾಸಾ-1 ಅವರು ಹೊಲಕ್ಕೆ ಹೋದಾಗ 1 ಮತ್ತು 2ನೇ ಆರೋಪಿತರು ಗಳೆ ಹೊಡೆಯುತ್ತಿದ್ದರು, ಆಗ ಚಾಸಾ-1 ಅವರು ಗಳೆಹೊಡೆಯ ಬೇಡಿ ಎಂದು 2ನೇ ಆರೋಪಿಗೆ ಹೇಳಿದಾಗ ಚಾಸಾ-1 ಅವರಿಗೆ ಮಾನಕ್ಕೆ ಕುಂದು ಬರುವ ಹಾಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ,1ನೇ ಆರೋಪಿ ಚಾಸಾ-1 ಅವರಿಗೆ ತಳ್ಳಿ ಹೊಡೆದಿರುತ್ತಾನೆ, 2ನೇ ಆರೋಪಿ ಚಾಸಾ-1 ಅವರಿಗೆ ಕೊಡಲಿ ಬಡಿಗೆಯಿಂದ ಹೊಡೆದು ಖಲಾಸ ಮಾಡುತ್ತೇವೆ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ, ನಂತರ ಅದೇ ದಿನ ಚಾಸಾ-

1 ಅವರು ಪೊಲೀಸ ಠಾಣೆಗೆ ಹೋಗಿ ದೂರನ್ನು ನೀಡಿರುತ್ತಾರೆ, ದಿನಾಂಕ 20-02-2022 ರಂದು ಘಟನೆಯ ಕಲುರಿತು ಬಿರಾಳ ಹಿಸ್ಸಾ ಗ್ರಾಮದಲ್ಲಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಚಾಸಾ-4ರವರನ್ನು ಸಹಾಯಕ ಸರ್ಕಾರಿ ಅಭೀಯೋಜಕರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿರುತ್ತಾರೆ. ಆರೋಪಿ ಪರ ವಕೀಲರು ಚಾಸಾ-4 ರವರ ಪಾಟೀ ಸವಾಲಿನಲ್ಲಿ 1ನೇಆರೋಪಿತಳು ಜಮೀನು ವಿಚಾರವಾಗಿ ಇದೇ ನ್ಯಾಯಾಲಯದಲ್ಲಿಅಸಲು ದಾವಾ ನಂ 123/2021 ನ್ನು ಸಲ್ಲಿಸಿರುತ್ತಾರೆಂದು ಒಪ್ಪಿ ಕೊಳ್ಳುತ್ತಾರೆ. 1ನೇ ಆರೋಪಿತಳು 2015 ರಿಂದ 2023 ರವರೆಗೆ ಮೊಳಕಾಲು ನೋವಿನಿಂದ ಚಿಕಿತ್ಸೆ ಪಡೆಯುತ್ತಿದ್ದು , 1ನೇಆರೋಪಿತಳಿಗೆ ನಡೆಯಲು ಸಾಧ್ಯವಿಲ್ಲ ಎಂಬ ಸೂಚನೆಯನ್ನು ನಿರಾಕರಿಸಿರುತ್ತಾರೆ. ಚಾಸಾ-1 ರವರ ಗಂಡನಿಗೂ ಮತ್ತು ಚಾಸಾ-1 ರವರಿಗೂ ಸಂಬಂಧ ಸರಿ ಇಲ್ಲ ಎಂದು ಒಪ್ಪಿ ಕೊಳ್ಳುತ್ತಾರೆ. ಆರೋಪಿ ಪರ ವಕೀಲರು ಚಾಸಾ-4 ರವರಿಗೆ ಘಟನೆ ನಡೆದಿಲ್ಲ ಎಂಬ ಸೂಚನೆಯನ್ನು ನಿರಾಕರಿಸಿರುತ್ತಾರೆ.

14. ಚಾಸಾ-5 ಗೊಲ್ಲಾಳಪ್ಪ, ಇವರು ತಮ್ಮ ಸಾಕ್ಷ್ಯದಲ್ಲಿ, 03 ವರ್ಷಗಳ ಹಿಂದೆ ಮದ್ಯಾಹ್ನ 12-30 ಗಂಟೆ ಸಮಯದಲ್ಲಿ ಬಿರಾಳ ಹಿಸ್ಸಾ ಗ್ರಾಮದಲ್ಲಿ ಹೊಲದ ವಿಚಾರವಾಗಿ ಆರೋಪಿತರು ಚಾಸಾ-1 ಅವರ ಹೊಲದಲ್ಲಿ ಗಳೆ ಹೊಡೆಯುತ್ತಿದ್ದಾಗ, ಆಗ ಚಾಸಾ-1 ಅವರು ಗಳೆಹೊಡೆಯ ಬೇಡಿ ಎಂದು ಹೇಳಿದಾಗ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು, 1ನೇ ಆರೋಪಿ ಚಾಸಾ-4 ಅವರಿಗೆ ಕೈಹಿಡಿದು ಎಳೆದಾಡಿ ನೂಕಿಸಿಕೊಟ್ಟು, ನಂತರ ಅದೇ ದಿನ ಚಾಸಾ-1 ಅವರು ಪೊಲೀಸ ಠಾಣೆಗೆ ಹೋಗಿ ದೂರನ್ನು ನೀಡಿರುತ್ತಾರೆ, ಆ ಬಗ್ಗೆ ಬಿರಾಳ ಹಿಸ್ಸಾ ಗ್ರಾಮದಲ್ಲಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು, ತಮ್ಮ

ಸಾಕ್ಷಿ ನುಡಿಯುತ್ತಾರೆ. ಚಾಸಾ-5 ರವರು ಘಟನೆಯ ಬಗ್ಗೆ ಕೇಳಿ ತಿಳಿದುಕೊಂಡ ಬಗ್ಗೆ ಸಾಕ್ಷಿದಾರರಾಗಿರುತ್ತಾರೆ. ಚಾಸಾ-5 ರವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪಾಟೀ ಸವಾಲು ಮಾಡಿರುತ್ತಾರೆ. ಆರೋಪಿ ಪರ ವಕೀಲರು ಚಾಸಾ-5 ರವರ ಪಾಟೀ ಸವಾಲಿನಲ್ಲಿ 1ನೇ ಆರೋಪಿತಳು ಜಮೀನು ವಿಚಾರವಾಗಿ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ನಂ 123/2021 ನ್ನು ಸಲ್ಲಿಸಿರುತ್ತಾರೆಂದು ಒಪ್ಪಿ ಕೊಳ್ಳುತ್ತಾರೆ. 1ನೇ ಆರೋಪಿತಳು 2015 ರಿಂದ 2023 ರವರೆಗೆ ಮೊಳಕಾಲು ನೋವಿನಿಂದ ಚಿಕಿತ್ಸೆ ಪಡೆಯುತ್ತಿದ್ದು, 1ನೇ ಆರೋಪಿತಳಿಗೆ ನಡೆಯಲು ಸಾಧ್ಯವಿಲ್ಲ ಎಂಬ ಸೂಚನೆಯನ್ನು ನಿರಾಕರಿಸಿರುತ್ತಾರೆ. ಚಾಸಾ-1 ರವರ ಗಂಡನಿಗೂ ಮತ್ತು ಚಾಸಾ-1 ರವರಿಗೂ ಸಂಬಂಧ ಸರಿ ಇಲ್ಲ ಎಂದು ಒಪ್ಪಿ ಕೊಳ್ಳುತ್ತಾರೆ. ಆರೋಪಿ ಪರ ವಕೀಲರು ಚಾಸಾ-5 ರವರಿಗೆ ಘಟನೆ ನಡೆದಿಲ್ಲ ಎಂಬ ಸೂಚನೆಯನ್ನು ನಿರಾಕರಿಸಿರುತ್ತಾರೆ.

15. ಚಾಸಾ-6 ಅಮರಗೊಂಡ, ಮುಖ್ಯ ಪೇದೆ, ಇವರು ತಮ್ಮ ಸಾಕ್ಷ್ಯದಲ್ಲಿ , ದಿನಾಂಕ 20-02-2022 ರಂದು ಮದ್ಯಾಹ್ನ 01-05 ರ ಸಮಯದಲ್ಲಿ ತಾನು ಕಚೇರಿಯಲ್ಲಿದ್ದಾಗ ಚಾಸಾ-1 ಅವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಪ್ರಕರಣವನ್ನು ದಾಖಲಿಸಿಕೂಂಡು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ, ಅದೇ ದಿನ ಘಟನಾ ಸ್ಥಳಕ್ಕೆ ಬೇಟಿ ನೀಡಿ ಪಂಚರ ಸಮಕ್ಷಮ ಗುನ್ನಾ ಜಾಗೆಯ ಪಂಚನಾಮೆ ಮಾಡಿರುತ್ತೇನೆ, ಅದೇ ದಿನ ಚಾಸಾ-4 ಮತ್ತು 6 ಅವರ ಹೇಳಿಕೆಗಳನ್ನು ಪಡೆದಿರುತ್ತೇನೆ, ದಿನಾಂಕ 02-05-2022 ರಂದು ಆರೋಪಿತರಿಗೆ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ, ದಿನಾಂಕ 14-05-2022 ರಂದು ಗುನ್ನಾ ಜಾಗದ ಸರ್ವೆ ನಂ.47 ರ ಪಹಣಿಯನ್ನು ಚಾಸಾ-1 ಅವರಿಂದ

ಪಡೆದಿರುತ್ತೇನೆ, ದಿನಾಂಕ 14-05-2022 ರಂದು ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ದ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತೇನೆ ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ಆರೋಪಿಗೆ ಸಹಾಯವಾಗುವ ಯಾವುದೇ ಪೂರಕ ಅಂಶಗಳು ದೊರೆತಿರುವುದಿಲ್ಲ.

16. ಆರೋಪಿತರ ವಿರುದ್ದ ಮಾಡಲಾದ ಆಪಾದನೆಯು ರುಜುವಾತು ಪಡಿಸಲು ಅಭಿಯೋಜನೆಯ ಒಟ್ಟು ಆರು ಸಾಕ್ಷಿಗಳನ್ನು ಹಾಜರಪಡಿಸಿರುತ್ತಾರೆ. ಚಾಸಾ-1 ರವರು ತಮ್ಮ ಪಾಟೀ ಸವಾಲಿನಲ್ಲಿ ಸರ್ವೆ ನಂ 47 ಕ್ಕೆ ಸಂಬಂಧಪಟ್ಟಂತೆ 1ನೇ ಆರೋಪಿತರು ಇದೇ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆಂದು ಒಪ್ಪಿಕೊಳ್ಳುತ್ತಾರೆ. ಚಾಸಾ-1 ರವರು ತಮ್ಮ ಗಂಡ 1ನೇ ಆರೋಪಿತರಿಗೆ 04 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆಂದು ಒಪ್ಪಿಕೊಳ್ಳುತ್ತಾರೆ. ಚಾಸಾ-1, 4 ಮತ್ತು 5 ರವರು ಸಂಬಂಧಿಕರಾಗಿರುವುದರಿಂದ ಸದರಿ ಸಾಕ್ಷಿದಾರರ ಸಾಕ್ಷಿಗಳು ನಂಬಲು ಅನರ್ಹವಾಗಿರುತ್ತದೆ. ಈ ಪ್ರಕರಣದಲ್ಲಿ ಚಾಸಾ-1 ರವರು 2ನೇ ಆರೋಪಿತರ ವಿರುದ್ದ ತಮಗೆ ಅವಮಾನವಾಗುವ ರೀತಿಯಲ್ಲಿ ಬೈದಿರುತ್ತಾರೆಂದು ಹೇಳಿರುತ್ತಾರೆ. ಆದರೆ ನಿರ್ದಿಷ್ಟವಾಗಿ ಯಾವ ರೀತಿಯಾಗಿ ಯಾವ ಶಬ್ದಗಳಿಂದ ಬೈದಿರುತ್ತಾರೆಂದು ತಮ್ಮಸಾಕ್ಷಿಗಳಲ್ಲಿ ಹೇಳಿರುವುದಿಲ್ಲ. ಈ ಪ್ರಕರಣದಲ್ಲಿ ಮುಖ್ಯವಾಗಿ ಘಟನೆಯ ದಿನಾಂಕವೂ 16.02.2024 ರಂದು ಆಗಿರುತ್ತದೆ. ಆದರೆ ಚಾಸಾ-1 ರವರು ಪಿರ್ಯಾದಿ ನೀಡಿದ್ದು ದಿನಾಂಕ 20.02.2024 ರಂದು ಒಟ್ಟು 4 ದಿನಗಳು ಪಿರ್ಯಾದಿ ನೀಡಲು ವಿಳಂಬವಾಗಿರುತ್ತದೆ. ಚಾಸಾ-1 ಮತ್ತು ಆರೋಪಿತರ ನಡುವೆ ಸಿವಿಲ್ ವಾಜ್ಯಗಳು ಇರುವುದು ಸ್ಪಷ್ಟವಾಗಿಕಂಡು ಬರುತ್ತದೆ. ಚಾಸಾ-1, 4 ಮತ್ತು 5 ಸಾಕ್ಷಿಗಳಿಂದ ಸದರಿ ಅಂಶವು ರುಜುವಾತಾಗುತ್ತದೆ. ಆದ್ದರಿಂದ ಸದರಿ ಘಟನೆ

ನಡೆದಿದೆ ಎಂಬುದು ಈ ನ್ಯಾಯಾಲಯವು ಸಂಶಯವಾಗಿ ನೋಡಬೇಕಾಗುತ್ತದೆ. ಚಾಸಾ-1, 4 ಮತ್ತು 5 ರವರ ಹೇಳಿಕೆಗೂ ಮತ್ತು ಚಾಸಾ-1, 4 ಮತ್ತು 5 ರವರ ಮುಖ್ಯ ವಿಚಾರಣೆಯಲ್ಲಿ ಭೀನ್ನತೆಗಳು ಇರುವದು ಕಂಡು ಬರುತ್ತದೆ. ಆದ್ದರಿಂದ ಆರೋಪಿತರ ವಿರುದ್ದ ಮಾಡಲಾದ ಆರೋಪವನ್ನು ನಿಸಂದೇಹವಾಗಿ ರುಜುವಾತುಪಡಿಸಲು ಅಭೀಯೋಜನೆಯು ವಿಫಲವಾಗಿರುತ್ತದೆ. ಆದ್ದರಿಂದ ಸಂಶಯ ಲಾಭ ಆರೋಪಿಗೆ ನೀಡಿ ಅಂಶ 1 ರಿಂದ 5 ನ್ನು ನಕಾರಾತ್ಮವಾಗಿ ಉತ್ತರಿಸಿರುತ್ತೇನೆ.

17. **<u>ಅಂಶ ನಂ.6</u>:-** ಅಂಶ ನಂ.1 ರಿಂದ 5 ನ್ನು ನಕಾರಾತ್ಮಕ ಎಂದು ಉತ್ತರಿಸಿರುವುದರಿಂದ ಈ ಕೆಳಕಂಡ ಆದೇಶ ಮಾಡಲಾಗಿರುತ್ತದೆ.

**<u>ಆ ದೇ ಶ</u>**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248 (1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಆರೋಪಿ ಸಂ.1 ರಿಂದ 3 ಇವರನ್ನು ಭಾರತೀಯ ದಂಡ ಸಂಹಿತೆ ಕಲಂ 447, 323, 504, 509, 506, ಸಹ ಕಲಂ 34 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕೆ ನಿರ್ದೋಷಿಗಳೆಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತರು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಭದ್ರತೆಗಳನ್ನು 6 ತಿಂಗಳವರೆಗೆ ವಿಸ್ತರಿಸಲಾಗಿದೆ.

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು

ಮಾಡಿದ್ದು, ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ 06ನೇ ಮಾರ್ಚ - 2026 ರಂದು ತೀರ್ಪನ್ನು ಘೋಷಿಸಲಾಯಿತು)

**(ಶ್ರೀ ಕಾಶಿನಾಥ ವಿ. ಉಪ್ಪಾರ್)**
ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.

**<u>ಅನುಬಂಧ</u>**

**<u>ಅಭಿಯೋಜನೆಯ ಪರವಾಗಿ ಗುರ್ತಿಸಲ್ಪಟ್ಟಿರುವ ಸಾಕ್ಷಿದಾರರ ಪಟ್ಟಿ</u>**

| | | |
|---|---|---|
| ಪಿ.ಡಬ್ಲ್ಯೂ-1 | : | ದೇವಕಿ ಗಂಡ ಲಕ್ಷ್ಮಣ |
| ಪಿ.ಡಬ್ಲ್ಯೂ-2 | : | ಮಹಾಂತಗೌಡ ತಂದೆ ಶಿವಲಿಂಗಪ್ಪಗೌಡ |
| ಪಿ.ಡಬ್ಲ್ಯೂ-3 | : | ಚಂದ್ರಭಾಗಮ್ಮ ಗಂಡ ಮಲ್ಲಿಕಾರ್ಜು |
| ಪಿ.ಡಬ್ಲ್ಯೂ-4 | : | ಗೊಲ್ಲಾಳಪ್ಪ ತಂದೆ ಮಹಾಂತಪ್ಪ |
| ಪಿ.ಡಬ್ಲ್ಯೂ-5 | : | ಅಮರಗೊಂಡ ತಂದೆ ದುರಗಪ್ಪ ಮುಖ್ಯ ಪೇದೆ |
| ಪಿ.ಡಬ್ಲ್ಯೂ-6 | : | ಶಾಂತಗೌಡ ತಂದೆ ಶಿವರಾಯಗೌಡ |

**<u>ಅಭಿಯೋಜನೆಯ ಪರವಾಗಿ ಗುರ್ತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ</u>**

| | | |
|---|---|---|
| ನಿ.ಪಿ.1 | : | ದೂರು |
| ನಿ.ಪಿ.1 (ಎ) | : | ಪ್ರಾಸಾ-5 ರವರ ಸಹಿ. |
| ನಿ.ಪಿ.2 | : | ಪಂಚನಾಮೆ |
| ನಿ.ಪಿ.2 (ಎ) | : | ಪ್ರಾಸಾ-2 ರವರ ಸಹಿ. |
| ನಿ.ಪಿ.2 (ಬಿ) | : | ಪ್ರಾಸಾ-2 ರವರ ಸಹಿ. |
| ನಿ.ಪಿ.3 | : | ಪ್ರಥಮ ವರ್ತಮಾನ ವರದಿ |

KAKB620011422022

ನಿ.ಪಿ.3 (ಎ) : ಪ್ರಾಸಾ-5 ರವರ ಸಹಿ.

**ಆರೋಪಿತರ ಪರವಾಗಿ ಗುರ್ತಿಸಲ್ಪಟ್ಟಿರುವ ಸಾಕ್ಷಿದಾರರ ಪಟ್ಟಿ**

- ಇಲ್ಲ -

**ಆರೋಪಿತರ ಪರವಾಗಿ ಗುರ್ತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ**

- ಇಲ್ಲ -

**ಅಭಿಯೋಜನೆ ಪರವಾಗಿ ಗುರ್ತಿಸಲಾದ ಮುದ್ದೆಮಾಲುಗಳ ವಿವರ**

- ಇಲ್ಲ -

ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.

Dictated on : 06-03-2026
Transcribed on : 06-03-2026
checked on : 06-03-2026
Signed on : 06-03-2026

KASHINATH VASANT UPPAR

Digitally signed by KASHINATH VASANT UPPAR
Date: 2026.03.07 10:59:43 +0530

(**Kashinath V. Uppar**)
**CIVIL JUDGE JMFC, Jewargi.**

Visit **ecourts.gov.in** for updates or download mobile app "**eCourts Services**" from Android or iOS